



ಮೇಘಾಲಯ ಎನ್ನುತ್ತಾರೆ. ಇದು ಈಶಾನ್ಯ ಪ್ರದೇಶವಾಗಿರುವುದರಿಂದ, ಇಲ್ಲಿ ಸೂರ್ಯೋದಯ ಬಹಳ ಬೇಗ. ಸಂಜೆಯೂ ಅಷ್ಟೇ. ಬೇಗ ಕತ್ತಲು ಆವರಿಸುತ್ತದೆ.

ಇಲ್ಲನ ದಟ್ಟವಾದ ಕಾನನಗಳ ಮಧ್ಯೆ ನಿರಂತರ ಮಳೆಯಿಂದ ಜಲಪಾತಗಳ ಭೋರ್ಗರೆತ ಸದಾ ಖುಷಿ ಕೊಡುತ್ತದೆ. ಅದರಲ್ಲೂ ವಿಶೇಷವಾಗಿ 'ಲಿವ್ವಿಂಗ್ ರೂಟ್ ಬ್ರಿಡ್ಜ್' ಅತ್ಯದ್ಭುತ. ಕನ್ನಡದಲ್ಲಿ ಇದನ್ನು 'ಜೀವಂತ ಬೇರಿನ ಸೇತುವೆ' ಎನ್ನಬಹುದು.

ಚಿರಾಪುಂಜಿಯಿಂದ ಸುಮಾರು 20 ಕಿ.ಮೀ ದೂರದಲ್ಲಿ ಟೈರ್ನ ಎಂಬ ಗ್ರಾಮಕ್ಕೆ ಹತ್ತಿರ ಜನ ಸಂಚಾರಕ್ಕೆ ಖಾಸಗಿ ವಾಹನಗಳನ್ನೇ ಅವಲಂಬಿಸಿದ್ದಾರೆ. ಟೈರ್ನ ಗ್ರಾಮದಿಂದ ಸುಮಾರು 4 ಕಿ.ಮೀ ಕೆಳಗೆ ಇಳಿದರೆ ಮೊದಲು ಸಿಗುವುದು 'ಸಿಂಗಲ್ ರೂಟ್ ಬ್ರಿಡ್ಜ್.' ಇದರ ಉದ್ದ ಸುಮಾರು 60 ಅಡಿಗಳು. ನೋಡಲು ಇಂಗ್ಲಿಷ್‌ನ V (ವಿ) ಆಕಾರದಲ್ಲಿದೆ. ಈ ಸೇತುವೆ ಮಧ್ಯೆ ನಿಂತು ಕೆಳಗೆ ನೋಡಿದರೆ, ಭೋರ್ಗರೆಯುವ ನದಿ; ಬಲಭಾಗದಲ್ಲಿ ಜಲಪಾತ.. ಅದ್ಭುತ ನಿಸರ್ಗ ಸೌಂದರ್ಯ.

ಇಲ್ಲಿಂದ 5 ಕಿ.ಮೀ ದೂರ ನಡೆದರೆ 'ಡಬಲ್ ಡೆಕ್ಕರ್ ಬ್ರಿಡ್ಜ್' ಕಾಣಸಿಗುತ್ತದೆ. ಸುಮಾರು 30 ಅಡಿ ಉದ್ದವಿರುವ ಎರಡು ಸೇತುವೆಗಳು ಅಕ್ಕಪಕ್ಕದಲ್ಲಿ ಒಂದರ ಮೇಲೊಂದಿವೆ. ಒಂದು ಹೋಗಲು ಮತ್ತೊಂದು ಬರಲು.

ಇಲ್ಲಿನ ವಾರ್ಕಾಸಿ ಎನ್ನುವ ಬುಡಕಟ್ಟು ಜನಾಂಗ ಈ ಸೇತುವೆಯನ್ನು ನಿರ್ಮಿಸಿದೆ. ದಟ್ಟಡವಿಯಲ್ಲಿಯೇ ವಾಸವಾಗಿರುವ ಇವರ ಮುಖ್ಯ ಕಸುಬು ಕೃಷಿ. ನದಿ ದಾಟಲು ತಾವೇ ನಿರ್ಮಿಸಿಕೊಂಡಿರುವ ಬೇರಿನ ಸೇತುವೆಯಿದು. ಇಂತಹ ಸೇತುವೆಯೊಂದನ್ನು ನಿರ್ಮಿಸಲು ಕನಿಷ್ಟ 15 ವರ್ಷಗಳು ಬೇಕಂತೆ. ಇದು ರಬ್ಬರ್ ಮರದ ಬೇರು.

## ಸೇತುವೆ ನಿರ್ಮಾಣ ಕಲೆ

ಈ ಸೇತುವೆಯನ್ನು ನಿರ್ಮಾಣ ಮಾಡಲು, ಮೊದಲು ಅಡಿಕೆ ಮರದ ಸೀಳನ್ನು ಒಂದಕ್ಕೊಂದನ್ನು ಜೋಡಿಸಿ ಒಂದು ದಡದಿಂದ ಇನ್ನೊಂದು ದಡಕ್ಕೆ ಕಟ್ಟುತ್ತಾರೆ. ಇದಕ್ಕೆ ರಬ್ಬರ್ ಮರದ ಬೇರನ್ನು ತುದಿಯಲ್ಲಿ ಸುತ್ತುತ್ತಾರೆ. ಹೀಗೆ ಸುತ್ತಿದ ಬೇರು ಸುಮಾರು ವರ್ಷಗಳ ನಂತರ, ಅಡಕೆ ಮರದ ಸೀಳನ್ನು ಬಳಸುತ್ತಾ ಮುಂದಿನ ದಡವನ್ನು ತಲುಪಿ ಭೂಮಿಯ ಆಳಕ್ಕೆ ಇಳಿಯುತ್ತದೆ. ಬೇರು ಬಲಿತ ನಂತರ ಇದನ್ನು ನಾಜೂಕಿನಿಂದ ಹೆಣೆದು ಸೇತುವೆ ನಿರ್ಮಿಸುತ್ತಾರೆ. ಇವರ ಈ ಪ್ರಾಕೃತಿಕ ಸೇತುವೆ ನಿರ್ಮಾಣದ ಕಲೆ ನಿಜಕ್ಕೂ ಅತ್ಯದ್ಭುತ.

ಇಲ್ಲಿನ ಬುಡಕಟ್ಟು ಜನಾಂಗ ಪ್ರವಾಸಿಗರನ್ನು ಅತ್ಯಂತ ಸೌಜನ್ಯದಿಂದ ಕಾಣುತ್ತದೆ. ಇಲ್ಲಿಯ ಕಂಚೀಕಾಯಿ (ಎಳಲೇಕಾಯಿ) ಪಾನಕ ಸೇವಿಸಿದರಂತೂ ಅಷ್ಟು ಹೊತ್ತು ಸವೆಸಿದ ಕಠಿಣ ಹಾದಿಯ ದಣಿವೆಲ್ಲ ಮಾಯವಾಗಿಸುವಂಥದು. ಕಾಡಿನ ನಡುವೆ ಬದುಕುವ ಇವರ ಜೀವನ ಕಷ್ಟವಾದರೂ ಮುಖದಲ್ಲಿ ಸಂತೃಪ್ತಿಯ ಕಳೆ ಮಾತ್ರ ಅಬ್ಬಾ!